(ದಿನಾಂಕ 24-02-2018 ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣೀಕರಿಸಲಾಯಿತು)

**ಪಾಟೀ ಸವಾಲುಃ ವಾದಿ ಪರ ವಕೀಲರಿಂದ**

ಈ ದಾವೆಯಲ್ಲಿಯ ವಂಶಾವಳಿಯನ್ನು ನಾನು ನೋಡಿಲ್ಲ. ಕಂದಾಯ ಇಲಾಖೆಯಿಂದ ನೀಡಿದ ವಂಶವೃಕ್ಷವನ್ನು ನಾನು ನೋಡಿಲ್ಲ. 1 ನೇ ಪ್ರತಿವಾದಿ ಹಾಗೂ ವಾದಿಯರ ನಡುವೆ ನಡೆದ ಓಎಸ ನಂಬರ 430/01 ದಾವೆಯ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಈಗ ನಿಪಿ-74 ಫೋಟೋ ನೋಡುತ್ತಿದ್ದು, ಅದರಲ್ಲಿ 1 ನೇ ವಾದಿ, ಆತನ ಹೆಂಡತಿ ಮತ್ತು 1 ನೇ ಪ್ರತಿವಾದಿ ಇದ್ದಾರೆ. ಉಳಿದವರು ಯಾರು ಎಂದು ಗೊತ್ತಿಲ್ಲ. ನಾನು ಈಗ ನೋಡುತ್ತಿರುವ ನಿಪಿ-75 ಫೋಟೋದಲ್ಲಿಯೂ ಸಹಾ ಮೇಲೆ ಹೇಳಿದ ವ್ಯಕ್ತಿಗಳು ಇದ್ದಾರೆ. 1 ನೇ ವಾದಿಯ ಮದುವೆಯು 1 ನೇ ಪ್ರತಿವಾದಿಯ ಮನೆಯ ಮುಂದೆ ಆದ ಬಗ್ಗೆ ನಿಪಿ-69 ರಲ್ಲಿ ನಮೂದಿದೆ ಎಂದರೆ ಗೊತ್ತಿಲ್ಲ.

ಬಸವರಾಜಪ್ಪ ತಂದೆ ಮಹಾಲಿಂಗಪ್ಪ ತಾವರಗುಂದಿ ಎಂಬ ಹೆಸರಿನವನು ನಮ್ಮೂರಿನಲ್ಲಿ 1 ನೇ ವಾದಿ ಒಬ್ಬನೇ ಇರುತ್ತಾನೆ. 1 ನೇ ವಾದಿ ಮತ್ತು 1 ರಿಂದ 3 ನೇ ಪ್ರತಿವಾದಿಯರ ಹೆಸರುಗಳು ಒಟ್ಟಿಗೆ ಮತದಾರರ ಯಾದಿಯಲ್ಲಿವೆ ಎಂದರೆ ಸರಿಯಲ್ಲ. ಅವರು ಬೇರೆ ಬೇರೆ ವಾಸ ಇದ್ದಾರೆ. 1 ನೇ ಪ್ರತಿವಾದಿಗೆ ಯಾರೂ ಅಳಿಯಂದಿರು ಇಲ್ಲ. ನಮ್ಮ ವಿರುದ್ಧ 1 ನೇ ಪ್ರತಿವಾದಿ ಭೂ ನ್ಯಾಯ ಮಂಡಳಿಗೆ ಫಾರ್ಮ ನಂಬರ-7 ನ್ನು ಸಲ್ಲಿಸಿದ್ದ ಎಂದರೆ ಸರಿ. ಆ ಸಮಯದಲ್ಲಿ ಆತನ ತಾಯಿ ಜೀವಂತ ಇದ್ದಳು ಎಂದರೆ ಮಾಹಿತಿ ಇಲ್ಲ. ಸದರಿ ಫಾರ್ಮ ನಂಬರ - 7 ನಿಪಿ-61 ರಲ್ಲಿ 1 ನೇ ಪ್ರತಿವಾದಿಯ ತಾಯಿಯ ಹೆಸರು ಕೊಟ್ರವ್ವ ಎಂದು ಮತ್ತು ಅಳಿಯ ಎಂದರೆ 1 ನೇ ವಾದಿಯ ಹೆಸರನ್ನು ಕುಟುಂಬದ ಸದಸ್ಯರು ಎಂದು ತೋರಿಸಲಾಗಿದೆ ಎಂದರೆ ಗೊತ್ತಿಲ್ಲ.

ಭೂ ನ್ಯಾಯ ಮಂಡಳಿಯಲ್ಲಿ ದಾವಾದಾಸ್ತಿ 7 ಸರ್ವೆ ನಂಬರ 30/1 ರ ಬಗ್ಗೆ ವ್ಯಾಜ್ಯ ಇತ್ತು ಎಂದರೆ ಸರಿ. ಅದೇ ರೀತಿ ಮಾನ್ಯ ಉಚ್ಛ ನ್ಯಾಯಾಲಯದಲ್ಲೂ ಸಹಾ ನನ್ನ ಮತ್ತು 1 ನೇ ಪ್ರತಿವಾದಿಯ ನಡುವೆ ಸದರಿ ಆಸ್ತಿಯ ಬಗ್ಗೆ ವ್ಯಾಜ್ಯ ಇತ್ತು. ಭೂ ನ್ಯಾಯ ಮಂಡಳಿ ಮುಂದೆ ನಾನು ಸದರಿ ಜಮೀನು ನನ್ನ ಕಬ್ಜೆಯಲ್ಲಿದೆ ಎಂದು ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿ. 1 ನೇ ಪ್ರತಿವಾದಿಯು ರೈತ ನಾತೆಯಿಂದ ಸದರಿ ಜಮೀನನ್ನು ತಾನೇ ಸಾಗು ಮಾಡುತ್ತಿದ್ದುದ್ದಾಗಿ ಹೇಳಿರುತ್ತಾನೆ ಎಂದರೆ ಸರಿಯಲ್ಲ. ದಿನಾಂಕ 16-7-1981 ರಂದು 1 ನೇ ಪ್ರತಿವಾದಿ ಪರವಾಗಿ ಭೂ ನ್ಯಾಯಮಂಡಳಿಯಿಂದ ಆದೇಶವಾಗಿತ್ತು ಎಂದರೆ ಗೊತ್ತಿಲ್ಲ. ಸದರಿ ವ್ಯಾಜ್ಯ ಈಗಲೂ ಸಹಾ ಭೂ ನ್ಯಾಯಮಂಡಳಿಯಲ್ಲಿದೆ ಎಂದರೆ ಸರಿ. ಈಗ ನಾನು ಮತ್ತು 1 ನೇ ಪ್ರತಿವಾದಿ ರಾಜಿಯಾಗಿದ್ದೇವೆ ಎಂದರೆ ಸರಿ. ಸದರಿ ರಾಜಿಯನ್ನು ವಕೀಲರು ಮಾಡಿರುತ್ತಾರೆ. ಸದರಿ ಜಮೀನನ್ನು ನನಗೆ ಕೊಡಬೇಕೆಂದು ರಾಜಿ ಮಾಡಿದ್ದರು. ಸದರಿ ಜಮೀನಿನ ವ್ಯಾಜ್ಯದ ಕುರಿತು 1 ನೇ ಪ್ರತಿವಾದಿಯು ಪ್ರತ್ಯೇಕ ವಕೀಲರನ್ನು ನೇಮಕ ಮಾಡಿಕೊಂಡಿದ್ದಾನೆ ಎಂದರೆ ಸರಿ.

1 ನೇ ಪ್ರತಿವಾದಿ ಹರಿಹರ ನ್ಯಾಯಾಲಯದಲ್ಲಿ ಕೇಸು ಹಾಕಿದ ಬಗ್ಗೆ ಮಾಹಿತಿ ಇಲ್ಲ. 1 ನೇ ಪ್ರತಿವಾದಿ ಪರವಾಗಿ ಎನವಿಸಿ ವಕೀಲರನ್ನು ನೇಮಕ ಮಾಡಿಕೊಳ್ಳಲಾಗಿತ್ತು ಎಂದರೆ ಗೊತ್ತಿಲ್ಲ. ಸದರಿ ಕೇಸಿನ ಜಡ್ಜಮೆಂಟನ್ನು ನಾನು ನೋಡಿಲ್ಲ. ವಾದಿ ಸದರಿ ಕೇಸಿನ ಜಡ್ಜಮೆಂಟ ಮತ್ತು ಡಿಕ್ರಿಯನ್ನು ನಿಪಿ-71 ಹಾಜರ ಪಡಿಸಿದ್ದಾನೆ ಎಂದರೆ ಗೊತ್ತಿಲ್ಲ. ಅದರಲ್ಲಿ ವಂಶಾವಳಿ ಸಹಾ ನಮೂದು ಮಾಡಿದೆ ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ತಂದೆ ಈರಪ್ಪನ ಪರಿಚಯ ಇದೆ. ಈರಪ್ಪನ ತಂದೆ ನಾಗಪ್ಪನ ಪರಿಚಯ ಇಲ್ಲ. ದಾವಾಶೆಡ್ಯೂಲ್ ಬ 1 ಮತ್ತು 2 ಆಸ್ತಿಗಳು 1 ನೇ ಪ್ರತಿವಾದಿಯ ಅಜ್ಜ ನಾಗಪ್ಪನಿಂದ ಬಂದಿವೆ ಎಂದರೆ ಗೊತ್ತಿಲ್ಲ. ನಾನು ವಾದಿ ಹಾಜರ ಪಡಿಸಿರುವ ದಾಖಲಾತಿಗಳನು ನೋಡಿಲ್ಲ. 1932 ನೇ ಇಸ್ವಿಯಲ್ಲಿ ಡ ನಂಬರ 273 ಮಂಜೂರಾಗಿದೆ ಎಂದರೆ ಗೊತ್ತಿಲ್ಲ. ದಾವಾ ಶೆಡ್ಯೂಲಿ-1 ಮತ್ತು 2 ನೇ ಆಸ್ತಿಗಳು ಹಿರಿಯರಿಂದ ಬಂದ ಆಸ್ತಿಗಳು ಎಂದು ತೋರಿಸಲು ಡ ನಂಬರ 465, 1055 ನ್ನು ಹಾಜರ ಪಡಿಸಲಾಗಿದೆ ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಮತ್ತು ಆತನ ತಂದೆಗೆ ಜಮೀನಿನ ಆದಾಯವನ್ನು ಹೊರತು ಪಡಿಸಿ, ಬೇರೆ ಯಾವದೇ ಆದಾಯ ಇರಲಿಲ್ಲ. 1 ನೇ ಪ್ರತಿವಾದಿಗೂ ಸಹಾ ಜಮೀನಿನ ಆದಾಯ ಮಾತ್ರ ಇದೆ 1 ನೇ ಪ್ರತಿವಾದಿಗೆ ದಾನ ಪತ್ರದ ಮೂಲಕ ಮೃತ್ಯು ಪತ್ರದ ಮೂಲಕ ಮತ್ತು ಇತರೇ ಯಾವದೇ ನೋಂದಣಿ ದಾಖಲೆ ಮೂಲಕ ಆಸ್ತಿಗಳು ಬಂದಿಲ್ಲ.

1 ನೇ ಪ್ರತಿವಾದಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. 1 ನೇ ಪ್ರತಿವಾದಿ ಹಾಗೂ ಪ್ರತಿವಾದಿ 2 ಮತ್ತು 3 ರ ನಡುವೆ ವಾಟ್ನಿಯಾಗಿತ್ತು ಎಂದರೆ ಸರಿಯಲ್ಲ. ಮ್ಯುಟೇಶನ ನಂಬರ 1503 ನ್ನು ನಾನು ನೋಡಿಲ್ಲ. ನಾನು ಮತ್ತು ನನ್ನ ಹೆಂಡತಿ ಯಾವದೇ ಹಿಸ್ಸೆಯನ್ನು ಮಾಡಿಕೊಂಡಿಲ್ಲ. ದಾವಾ ಶೆಡ್ಯೂಲ್-ಕ ಆಸ್ತಿ ಮನೆ ಮತ್ತು ಖಾಲಿ ಜಾಗೆ ಹಿರಿಯರಿಂದ ಬಂದಿದ್ದವು ಎಂದರೆ ಸಾಕ್ಷಿಯು ಒಂದು ಮನೆ ಮತ್ತು ಜಾಗೆ ಮಾತ್ರ ಹಿರಿಯರಿಂದ ಬಂದಿದ್ದವು ಎಂದು ಹೇಳಿರುತ್ತಾರೆ ಅವುಗಳ ನಂಬರ ಗೊತ್ತಿಲ್ಲ. ದಾವಾ ಆಸ್ತಿಗಳ ಸರ್ವೇ ನಂಬರ, ಚಕ್ಕುಬಂದಿ ಮತ್ತು ಕ್ಷೇತ್ರವನ್ನು ಹೇಳಲಾಗುವುದಿಲ್ಲ

ನನ್ನ ಮುಖ್ಯ ಪ್ರಮಾಣ ಪತ್ರದಲ್ಲಿ ವಾದಿ ಮತ್ತು 1 ರಿಂದ 3 ನೇ ಪ್ರತಿವಾದಿಯರ ನಡುವೆ ಯಾವದೇ ಸಂಬಂಧ ಇಲ್ಲ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಈರಪ್ಪನಿಗೆ ನಾಗಪ್ಪ ಮತ್ತು ಚನಬಸಮ್ಮ ಎಂಬ ಇಬ್ಬರು ಮಕ್ಕಳು ಎಂದರೆ ಸರಿಯಲ್ಲ. ಚನ್ನಬಸಮ್ಮನ ಗಂಡ ಮಹಾಲಿಂಗಪ್ಪ ಎಂದರೆ ಮಾಹಿತಿ ಇಲ್ಲ. ಚನ್ನಬಸಮ್ಮ ಮತ್ತು ಮಹಾಲಿಂಗಪ್ಪರಿಗೆ ವಾದಿಯರು ಮಕ್ಕಳು ಇದ್ದಾರೆ ಎಂದರೆ ಸಾಕ್ಷಿಯು 1 ನೇ ವಾದಿ ಮಗ ಎಂದು ಮಾತ್ರ ಗೊತ್ತು ಎಂದು ಹೇಳಿರುತ್ತಾರೆ 2 ನೇ ವಾದಿ ಅವರ ಮಗಳು ಎಂದು ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದ 6 ನೇ ಪ್ಯಾರಾದಲ್ಲಿ ಬರೆಸಿರುವ ಸಂಗತಿಗಳನ್ನು ನಾನೇ ಹೇಳಿ ಬರೆಸಿದ್ದೇನೆ ಮತ್ತು ಅದು ಸರಿ ಇದೆ ಮತ್ತು ಅದರ ಬಗ್ಗೆ ಗೊತ್ತಿದೆ. 1 ನೇ ವಾದಿ ಗ್ರಾಮ ಪಂಚಾಯತಿ ಆಸ್ತಿ 88 ಮತ್ತು 89 ರಲ್ಲಿ ವಾಸ ಇದ್ದಾನೆ ಎಂದರೆ ಸರಿಯಲ್ಲ. ಆತನಿಗೆ ಹೆಂಡತಿ ಮತ್ತು 3 ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು ಇದ್ದಾರೆ ಎಂದರೆ ಸರಿ. ಅವರೆಲ್ಲರೂ ವೈಟಿ ಹೊನ್ನತ್ತಿಯಲ್ಲಿ ವಾಸ ಇದ್ದಾರೆ ಎಂದರೆ ಸರಿ. 1 ನೇ ವಾದಿ ವಾಸ ಇರುವ ಮನೆ ನಂಬರ ಗೊತ್ತಿಲ್ಲ.

ದಾವಾದಾಸ್ತಿಗಳೆಲ್ಲವೂ ಮೂಲ ಪುರುಷ ಈರಪ್ಪ ಮತ್ತು ಆತನ ತಂದೆಯಿಂದ ಬಂದಂತಹ ಆಸ್ತಿಗಳಾಗಿವೆ ಮತ್ತು ವಾದಿಯರು, ಪ್ರತಿವಾದಿ 1 ರಿಂದ 3 ಒಟ್ಟು ಕುಟುಂಬದ ಸದಸ್ಯರಾಗಿರುವುದರಿಂದ ಎಲ್ಲರಿಗೂ ಸಹಾ ದಾವಾದಾಸ್ತಿಗಳಲ್ಲಿ ಹಿಸ್ಸೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯರ ನಡುವೆ ದಾವಾ ಆಸ್ತಿ ಕುರಿತು ಯಾವತ್ತೂ ಹಿಸ್ಸೆ ಆಗಿಲ್ಲ ಎಂದರೆ ಸರಿಯಲ್ಲ. ನನಗೆ ಕೇಸಿನ ಬಗ್ಗೆ ಸ್ವಂತ ಮಾಹಿತಿ ಇಲ್ಲದೇ ಇದ್ದರೂ ಸಹಾ ನಾನು 1 ನೇ ಪ್ರತಿವಾದಿಯ ಮಾತನ್ನು ಕೇಳಿಕೊಂಡು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

(ಬಿ.ಜಿ. ಪ್ರಮೋದ)

ಓ ಹೇ ಕೆ ಸರಿ ಇದೆ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ರಾಣೆಬೆನ್ನೂರ.